ರಾಘವೇಂದ್ರ ಟಿಫನ್‌ನಲ್ಲಿದ್ದ ಕೆಲಸದ ಹುಡುಗ ಚಾಣಕ್ಯ ಮಾತ್ರ. ಅವನೇ ಅವನ ಏಕಮಾತ್ರ ಗೆಳೆಯ ಇಡೀ ಬೆಂಗಳೂರಿನಲ್ಲಿ. ರೂಮಿನಿಂದ ಹೊರಟು ಆಫೀಸಿಗೆ ಬರುವುದು ತಡವಾಗುತ್ತಿದ್ದರೆ ಚಾಣಕ್ಯನೇ ತಿಂಡಿಯನ್ನು ಅಭಿಜಿತನ ಆಫೀಸಿಗೆ ಕಳಿಸಿಕೊಡುತ್ತಿದ್ದ, ಸಂಜೆಯಾದರೆ ಅವನೇ ಒಂದು ಕಾಫಿಯನ್ನು ಅಭಿಜಿತನ ಎದುರಿಟ್ಟು ಸುಮ್ಮನೇ ನಡೆದುಬಿಡುತ್ತಿದ್ದ. ಅದೊಂದು ಬಗೆಯ ಗೆಳೆತನ ಅವರಿಬ್ಬರೂ ನಡುವೆಯೂ ಹೇಳದೆಯೂ ಬೆಳೆಯುತ್ತಿತ್ತು. ಈ ನಡುವೆ ಅಂದರೆ ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಹೀಗೆ ಅಭಿಜಿತನ ಒಳಲೋಕದೊಳಗೆ ಇದ್ದಕ್ಕಿದ್ದಂತೆ ಬಂದವಳೆಂದರೆ ಅಂಜಲಿ ಮಾತ್ರ.

ಇದೇ ಕಂಪನಿಯಲ್ಲಿ ಟೀಮ್ ಮ್ಯಾನೇಜರ್ ಆಗಿರುವ ಅಂಜಲಿ ಮನಸ್ಸಿಲ್ಲದಿದ್ದರೂ ಎಲ್ಲರೊಂದಿಗೂ ಮಾತನಾಡಲೇಬೇಕಾದ ಅನಿವಾರ್ಯತೆಯೊಂದನ್ನು ಅವಳ ಕೆಲಸವೇ ಹುಟ್ಟು ಹಾಕಿತ್ತು. ನೂರೊಂದು ರಗಳೆಗಳ ನಡುವೆಯೇ ಬದುಕುತ್ತಿರುವ ಬೆಂಗಳೂರಿನಂತ ಮಹಾನಗರಗಳ ಜನರನ್ನು ಸಣ್ಣ ಜಾಹೀರಾತುಗಳ ಮೂಲಕ ಮುಟ್ಟುವ ಕೆಲಸ ಅಂಜಲಿಗೆ ಅದೊಂದು ಬಗೆಯ ವಿಸ್ಮಯವನ್ನು ಉಂಟು ಮಾಡುತ್ತಿತ್ತು. ನಿಜಕ್ಕೂ ಮನುಷ್ಯನಿಗೆ ಬೇಕಾಗಿರುವುದು ಏನು ಎನ್ನುವುದರ ಜೊತೆಯೇ ಅವನಿಗೆ ಅವಶ್ಯಕತೆ ಇಲ್ಲದಿದ್ದರೂ ಮಾರುಕಟ್ಟೆ ಸೃಷ್ಟಿಸುತ್ತಿದ್ದ ಉತ್ಪನ್ನವೊಂದು ಅನಿವಾರ್ಯ ಎನ್ನುವ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದ ಬಂಡವಾಳಶಾಹಿಗಳ ಈ ಜಾಹೀರಾತು ಎನ್ನುವ ಅವರ ಮಾನಸಿಕ ಶಕ್ತಿಯ ಕ್ರಿಯೆಗೆ ಕಂಗಾಲಾಗಿದ್ದೂ ಇದೆ. ಇಲ್ಲಿ ಮನುಷ್ಯರ ಅಗತ್ಯಗಳಿಗೆ ಉತ್ಪತ್ತಿಯಾಗುತ್ತಿದ್ದ ವಸ್ತುಗಳಿಗಿಂತ ಉತ್ಪತ್ತಿಯಾಗುತ್ತಿರುವ ವಸ್ತುಗಳನ್ನು ಕೊಂಡುಕೊಳ್ಳಲೆಂದೇ ಸೃಷ್ಟಿಸಲಾಗುತ್ತಿರುವ ಮನುಷ್ಯರ ಬಗ್ಗೆ ಕಾಳಜಿಯೇ ಅಂಜಲಿಗೆ ಹೆಚ್ಚಾಗಿತ್ತು.

ಎಲ್ಲರಂತೆ ತನ್ನದೇ ಹಲವು ರಗಳೆಗಳಲ್ಲೇ ಮುಳುಗಿದ್ದ ಅಂಜಲಿಗೆ ಆಫೀಸಿನಲ್ಲಿ ನಡೆದ ಇನ್ನೊಂದು ಬಗೆಯ ರಗಳೆಯೇ ಅಭಿಜಿತನಿಗೆ ಹತ್ತಿರವಾಗುವಂತೆ ಮಾಡಿತ್ತು. ಮುಂಬೈನ ಚೆಂಬೂರು ಮೂಲದ ನೋಬೆಲ್ ನೈಟ್ ಹೆಸರಿನ ಕಂಪನಿಯೊಂದು ಹೊಸ ಬಗೆಯ ಕಾಂಡೋಮ್ ತಯಾರಿಸಿತ್ತು. ಡೇಟಿಂಗ್ ಆ್ಯಪ್‌ಗಳ ಅಬ್ಬರದ ಈ ದಿನಗಳಲ್ಲಿ ಒನ್ ನೈಟ್ ಸ್ಟ್ಯಾಂಡ್, ಲಿವ್ ಇನ್ ರಿಲೇಷನ್‌ಶಿಪ್, ಗೋಸ್ಟಿಂಗ್, ಫ್ರೆಂಡ್ಸ್ ವಿಥ್ ಬೆನೆಫಿಟ್ಸ್... ಹೀಗೆ ಸಹಜ ಸಂಬಂಧಗಳು ಕಠಿಣವಾಗುತ್ತಿರುವಾಗ ಈ ಬಗೆಯ ಉತ್ಪನ್ನಗಳಿಗೆ ಇರುವ ಬೇಡಿಕೆಯನ್ನು ಅರಿತಿದ್ದ ಈ ಕಂಪನಿಗೆ ಎಲ್ಲಾ ವಯೋಮಾನದವರಿಗೂ ಇಷ್ಟವಾಗುವಂತ ಜೊತೆಗೆ ಪ್ರಚೋದನಕಾರಿಯಲ್ಲದ ಕಾಂಡೋಮ್ ಕುರಿತಾದ ಜಾಹೀರಾತುವೊಂದನ್ನು ನಿರ್ಮಿಸಬೇಕಾಗಿತ್ತು. ಅಭಿಜಿತ ಜಾಹೀರಾತಿಗೆ ಬೇಕಾದ ಐಡಿಯಾಗಳನ್ನು ಕಲೆಹಾಕುವ ಕೆಲಸವನ್ನು ಎಂದಿನಂತೆ ಒಪ್ಪಿಕೊಂಡರೆ ಹೆಚ್ಚುವರಿಯಾಗಿ ಅಂಜಲಿಗೆ ಅದಕ್ಕೆ ಹೊಂದುವ ಮಾಡೆಲ್‌ಗಳನ್ನು ಹುಡುಕಿ ಫೈನಲ್ ಮಾಡುವ ಕೆಲಸವನ್ನು ವಹಿಸಲಾಯ್ತು. ತೀರಾ ಮುಜುಗರದಿಂದಲೇ ಈ ಕೆಲಸವನ್ನು ಒಪ್ಪಿಕೊಂಡ ಅಂಜಲಿಗೆ ಐಡಿಯಾದ ಪ್ರಾಸೆಸ್‌ನಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆಯೇ ವಿಪರೀತ ಎನ್ನುವಷ್ಟು ಮುಜುಗರವಾಗಲು ಆರಂಭವಾಗಿದ್ದನ್ನು ಅಭಿಜಿತ ಮಾತ್ರ ವಿಶೇಷವಾಗಿ ಗಮನಿಸಿದ್ದ.

ಟೀಮ್ ಮೀಟಿಂಗ್‌ಗಳಲ್ಲಿ ಉಳಿದವರೊಂದಿಗೆ ಈ ಪ್ರಾಜೆಕ್ಟ್ ಬಗ್ಗೆ ಮಾತನಾಡುವಾಗ ಅಂಜಲಿ ಹೆಚ್ಚು ಎನ್ನುವಷ್ಟು ಏನನ್ನೂ ಹೇಳುತ್ತಿರಲಿಲ್ಲ. ಈ ಮಾಡೆಲ್ ಅಟ್ರಾಕ್ಟಿವ್ ಆಗಿದ್ದಾರೆ ಅಂತಲೋ, ಅಪೀಯರೆನ್ಸ್ ಚೆನ್ನಾಗಿದೆ ಅಂತಲೋ, ಸ್ಕ್ರೀನ್ ಪ್ರಸೆನ್ಸ್ ಓಕೆ ಅಂತಲೋ ಹೇಳಿ ಸುಮ್ಮನಾಗಿಬಿಡುತ್ತಿದ್ದಳು. ಆದರೆ ಅದೇ ಟೀಮಿನಲ್ಲಿದ್ದ ಶಶಾಂಕ ಮಾತ್ರ ನೋ, ಶೀ ಇಸ್ ನಾಟ್ ಸೆಕ್ಸಿ ಎನಾಫ್. ಹರ್ ಬ್ರೆಸ್ಟ್ಸ್ ಆರ್ ನಾಟ್ ಇನ್ ರೈಟ್ ಸೈಜ್ ಅಂಡ್ ನಾಟ್ ದಟ್ ಗ್ರೇಟ್, ಎದೆ ಇನ್ನೊಂದಿಷ್ಟು ಉಬ್ಬಿದ್ದರೆ ಮೇ ಬಿ ವಿ ಕಾನ್ ಚ್ಯೂಸ್ ಹರ್ ಎನ್ನುವುದರಿಂದ ಆರಂಭಿಸಿ ಪ್ರೊಫೆಶನಲ್ ಹೆಸರಿನಲ್ಲಿ ಇನ್ನಷ್ಟು ಮುಂದೆ ಹೋಗಿ ಬಿಡುತ್ತಿದ್ದ.

ಅವನ ಮಾತುಗಳನ್ನು ಕೇಳುವಾಗ ಅಂಜಲಿ ಮುಜುಗರ ಅನುಭವಿಸುವುದನ್ನು ಗಮನಿಸುತ್ತಿದ್ದ ಅಭಿಜಿತ ಥಟ್ ಎಂದು ನಾನು ಐಡಿಯಾ ಡ್ರಾಫ್ಟ್ ಮಾಡಿದ ಮೇಲೆ ಮಾಡೆಲ್ ಯಾರು ಬೇಕು, ಅವರು ಹೇಗಿರಬೇಕು ಎನ್ನೋದನ್ನ ಹೇಳ್ತೀನಿ, ಸೋ ಅಂಜಲಿ ಈಗ ನೀವು ಶೂಟ್ ಪ್ಲಾನ್ ಬಗ್ಗೆ ಯೋಚನೆ ಮಾಡಬೇಡಿ ಎಂದು ಅವಳನ್ನು ಕ್ಷಣಾರ್ಧದಲ್ಲಿ